

■ ವಸುಮತಿ ಉಡುಪ

ಆಸ್ಪತ್ರೆಗೆ ಸೇರಿಸಿದ ಸಂಬಂಧಿ ಸುಭದ್ರಮ್ಮನನ್ನು ನೋಡಿ ಮಾತಾಡಿಸಿಕೊಂಡು ಮನೆಗೆ ಬಂದಿದ್ದರು ಶ್ರೀನಿವಾಸರಾಯರು ಮತ್ತು ಅವರ ಧರ್ಮಪತ್ನಿ ಶಾಂತಮ್ಮ. ನಡುಮಧ್ಯಾಹ್ನದ ಉರಿ ಬಿಸಿಲಲ್ಲಿ ಮನೆಗೆ ಬಂದು ಅಡುಗೆಗೆ ಕುಕ್ಕರ್ ಏರಿಸಬೇಕಾದ ಅನಿವಾರ್ಯದಿಂದ ಶಾಂತಮ್ಮ ಕನಲಿದ್ದರು. ಮೂರುಕಾಸಿನ ಸಹಾಯ ಗಂಡನಿಂದ ನಿರೀಕ್ಷೆ ಮಾಡುವಂತಿಲ್ಲ. ಹಾಯಾಗಿ ಕಾಲು ಚಾಚಿ ಮಲಗಿ ವಿಶ್ರಾಂತಿಸುಖ ಅನುಭವಿಸುತ್ತಿದ್ದಾರೆ. ಅಡುಗೆ ಆದ ಮೇಲೆ ಅಕ್ಷತೆ ಕೊಟ್ಟು ಕರೆದರೆ ಒಳಗೆ ಬಂದು ಉಂಡು ಹೋಗುವುದೇ ದೊಡ್ಡ ಉಪಕಾರ. ಹನ್ನೆರಡು ಮೈಲಿ ದೂರದ ಪೇಟೆಗೆ ಗಂಡ ಬಸ್ಸಲ್ಲಿ ಹೋಗಿ ಬರುವ ಮಾತಾಡಿದಾಗಲೇ ಕೆರಳಿತ್ತು ಶಾಂತಮ್ಮನಿಗೆ. ಒಂದು ಕಾರು ಗೊತ್ತು ಮಾಡಿದರೆ ಕರಗುತ್ತದೆಯಾ ಗಂಟು? ಯಾತಕ್ಕೆ ಕೂಡಿಟ್ಟು ಸರ್ಪದ ಹಾಗೆ ಕಾವಲು ಕಾಯಬೇಕು? ಬಸ್ಸು ಮನೆ ಬಾಗಿಲಿಗೆ ಬಂದು ಹತ್ತಿಸಿಕೊಂಡು ಹೋಗುವುದಿಲ್ಲ. ನಡೆಯಬೇಕು ಅರ್ಧ ಮೈಲಿ. ಹೋಗುವಾಗ, ಬರುವಾಗ ಸೇರಿ ಒಟ್ಟು ಒಂದು ಮೈಲಿ. ಪೇಟೆಯಲ್ಲಿ ಬಸ್ಸಿಳಿದಾಗ ಅಲ್ಲಿಂದ ಆಸ್ಪತ್ರೆಗೆ ಮತ್ತಿನ್ನಷ್ಟು ದೂರ. ಬಾಡಿಗೆ ಕಾರು ಮಾಡಿಕೊಂಡು ಹೋದರೆ ಸಲೀಸಾ? ಒಂದು ಫೋನ್ ಮಾಡಿದರೆ ಮನೆಬಾಗಿಲಿಗೆ ಬಂದು ನಿಲ್ಲುತ್ತದೆ ಕಾರು. ಗ್ರಾಸ್ತ ದುಡ್ಡು ಬಿಚ್ಚಲು ತಯಾರಿಲ್ಲ. ಹಾಗೂ ಬಾಯ್ಬಿಟ್ಟು ಹೇಳಿದರು ಶಾಂತಮ್ಮ, 'ರಂಗಣ್ಣನಿಗೆ ಹೇಳ್ಬೋದಿತ್ತು, ಕಾರು ತಗಂಬರ್ತಿದ್ದ...'

'ದುಡ್ಡು ಕೊಟ್ರೆ ರಂಗಣ್ಣ ಯಾಕೆ, ಅವನ ಅಪ್ಪನೂ ಬರ್ತ್ತಾನೆ...'

'ಅವನ ಉದ್ಯೋಗಾನೇ ಅದಪ್ಪಾ. ಪುಗಸಟ್ಟೆ ಬರೋಕೆ ಅವನೇನು ನೆಂಟನಾ?'

'ಅಲ್ವೇ, ಗಂಟೆಗೊಂದು ಅನ್ನೋ ಹಾಗೆ ಬಸ್ಸು ಓಡಾಡ್ತಿರುತ್ತೆ. ಒಂದಷ್ಟು ದೂರ ನಡ್ಕೊಂಡ್ಹೋದ್ರೆ ಕಾಲು ಸವೆಯಲ್ಲ. ನೀನಂತೂ ಕೂತಲ್ಲೇ ಕೂತು ತುಕ್ಕು ಹಿಡಿದು ಹೋಗಿದ್ದಿ.'

'ಕತ್ತೆ ಥರ ಮೈಮುರಿದು ಗೆಯ್ಯೋದು ಕಣ್ಣಿಗೆ ಬೀಳಲ್ವಾ? ಮನೆಕೆಲಸ ಅಂದ್ರೆ ಗಂಡಸ್ರಿಗೆ ಸಸಾರ. ಏನೋ ಒಂದು ಕಾಯಿಲೆ ಬಂದು ನಾಕು ದಿನ ನಾನು ಹಾಸಿಗೆ ಹಿಡಿದು ಮಲಗ್ಬೇಕು, ನೀವು ಕೈಲಿ ಸೌಟು ಹಿಡಿಯೋದು ನೋಡ್ಬೇಕು ಅಂತ ನಂಗೆ ಕುತ್ತಿಗೇವರೆಗೆ ಆಸೆ ಉಂಟು'.

'ಅದ್ಯಾವ ಮಹಾ ಬ್ರಹ್ಮವಿದ್ಯೆ? ನಾನು ಮಾಡ್ದಿರೋ ಕೆಲಸಾನಾ?'

ಇನ್ನು ಹಳೇಪುರಾಣ ಬಿಚ್ಚಿಕೊಳ್ಳುತ್ತೆ ಎಂದು ಗೊತ್ತು ಮಾಡಿಕೊಂಡ ಶಾಂತಮ್ಮ ಅಲ್ಲಿಂದ ಜಾಗ ಖಾಲಿ ಮಾಡಿದ್ದರು. ಹಿಂದಾನೊಂದು ಕಾಲದಲ್ಲಿ ಅಮ್ಮ ತೀರಿಕೊಂಡ ಮೇಲೆ ಹದಿವಯಸ್ಸಿನ ಹುಡುಗ ಅಪ್ಪನಿಗೆ ಅಟ್ಟು ಬಡಿಸಿದ್ದ ಕತೆ ಕೇಳಿ ಕೇಳಿ ಶಾಂತಮ್ಮನಿಗೆ ಕಿವಿ ತೂತು ಬಿದ್ದಿದೆ. ಆಯ್ತು, ಆಮೇಲೆ? ಮದುವೆಯಾಗಿ ತಾನು ಈ ಮನೆಯ ಹೊಸಿಲು ದಾಟಿ ಒಳಗೆ ಕಾಲಿಟ್ಟಿದ್ದೇ ಇಟ್ಟಿದ್ದು, ಬ್ರಹ್ಮಕಪಾಲದ ಹಾಗೆ ಸೌಟು ಕೈಗೆ ಅಂಟಿಕೊಂಡುಬಿಟ್ಟಿತು. ಅದೇನೋ ಗಾದೆ ಉಂಟಂತಲ್ಲ, 'ಅಡುಗೆ ಗೊತ್ತಿರೋ ಗಂಡ ಸಿಗ್ಬಾರ್ದು' ಅನ್ನುವಂತಾದ್ದು. ಅಡುಗೆಯ ಹದ ಹೇಳೋಕೆ ಬೇಕಾದರೆ ಎರಡು ಬಾಯಿ. ರುಚಿಯಾಗಿತ್ತು ಅಂದರೆ ಯಾವತ್ತೂ ಬಾಯಿ ಬಿಟ್ಟು ಹೇಳುವ ಪಂಚಾತಿಕೆ ಇಲ್ಲ. ಉಣ್ಣುವ ಅಳತೆ ನೋಡಿಯೇ ಗೊತ್ತು ಮಾಡಿಕೊಳ್ಳಬೇಕು.

ಶಾಂತಮ್ಮ ಮೆಟ್ಟುಗತ್ತಿ ಎಳೆದಿಟ್ಟುಕೊಂಡು ಹುಳಿಗೆ ಬಣ್ಣದ ಸೌತೆಕಾಯಿ ಹೆಚ್ಚತೊಡಗಿದರು. ತಿರುಳು ಕೈಂಯಾಗಿರದಿದ್ದರೆ ಸಾಸಿವೆ ಮಾಡಬಹುದು. ಬೀಜ ತೆಗೆದಿಟ್ಟುಕೊಂಡರೆ ನಾಳೆಗೆ ಸಾರು. ದಿನವೂ ಎರಡು ಅಡುಗೆ ಆಗಲೇಬೇಕು ಅನ್ನುವುದು ಅಭ್ಯಾಸಬಲ.

ಉದ್ದಕ್ಕೆ ಸೀಳು ಮಾಡಿದ ಸೌತೆಕಾಯಿಯಿಂದ ಒಂದು ಚೂರು ತಿರುಳು ತೆಗೆದು ಬಾಯಿಗಿಟ್ಟುಕೊಂಡರೆ, ವ್ಯಾಕ್, ಕಹಿ ವಿಷ. ಬುಡಹತ್ತ ತಿರುಳು ತೆಗೆದು ಹಾಕಿ ಸೌತೆಕಾಯಿ ಹೋಳು ಮಾಡಿದರು ಶಾಂತಮ್ಮ. ನಾಲಿಗೆಯ ಮೇಲೆ ಇನ್ನೂ ಕೈಂ ಕೈಂ, ಮನಸ್ಸಲ್ಲೂ.

ಈ ಲೋಕದಲ್ಲಿ ಎಂತೆಂತಾ ಗಂಡಸರು ಇರುತ್ತಾರೆ ಎಂದು ನೆನೆದರೆ ಅಚ್ಚರಿಯಾಗುತ್ತದೆ ಶಾಂತಮ್ಮನಿಗೆ. ಹೆಂಗಸರಿಗೂ ಆತ್ಮಗೌರವ, ಮಾನ, ಅವಮಾನ ಇರುತ್ತದೆ ಎಂದು ಎಷ್ಟೋ ಜನಕ್ಕೆ ಅರ್ಥವೇ ಆಗುವುದಿಲ್ಲ. ಪಾಪ ಸುಭದ್ರಮ್ಮ, ಗಂಡ ಹಂಗಿಸುವ ಮಾತಾಡಿದರೂ ತುಟಿ ಒಡೆಯಲಿಲ್ಲ. ಕೇಳಿ ಕೇಳಿ ಜೀವ ಜಡ್ಡುಗಟ್ಟಿ ಹೋಗಿರಬೇಕು. ಮನೆಯಲ್ಲಿರುವಾಗ ಹೇಗೋ ಮಾತಾಡಲಿ, ಮೂರನೆಯವರ ಎದುರು ಕಣ್ಣಟ್ಟಿಗಾದರೂ ಸೌಜನ್ಯದ ಎರಡು ಮಾತು ಬಾಯಿಂದ ಬರಬಾರದಾ? ಅದೂ ಹೆಂಡತಿ ಆಸ್ಪತ್ರೆಗೆ ಸೇರಿರುವಾಗ? ಶುಗರ್ರು, ಬಿ.ಪಿ. ಜಾಸ್ತಿಯಾಗಿತ್ತಂತೆ. ತಲೆ ತಿರುಗಿ ಬಿದ್ದರಂತೆ ಸುಭದ್ರಮ್ಮ. ಇಲ್ಲದಿದ್ದರೆ ಮನುಷ್ಯನಿಗೆ ಹೆಂಡತಿಗೆ ಕಾಯಿಲೆ ಇದೆ ಅನ್ನುವುದೂ ತಲೆಗೇ ಬರುತ್ತಿರಲಿಲ್ಲವೇನೋ.

'ಬೇಕಾದ್ದಕ್ಕಿಂತಾ ಜಾಸ್ತಿ ಮಾಡಿಡೋದು. ದಂಡ ಆಗುತ್ತೆ ಅಂತ ಕೂತ್ಗಂಡು ಮೂಗಿನವರೆಗೆ ತಿನ್ನೋದು, ಶುಗರ್ರು ಜಾಸ್ತಿಯಾಗ್ದೆ ಮತ್ತೇನಾಗುತ್ತೆ?' ಅಂದಿದ್ದರು ಸುಭದ್ರಮ್ಮನ ಗಂಡ, ಎಲ್ಲಾ ಬಲ್ಲ ತಿಳಿವಳಿಕಸ್ಥರಂತೆ. 'ಪಾಪ...' ಅನಿಸಿ ಶಾಂತಮ್ಮ ಸುಭದ್ರಮ್ಮನ ಮುಖ

